ಓ.ಎಸ್.ನಂ.288/2025

ಪಿ ಡಬ್ಲ್ಯೂ: 1

ದಿನಾಂಕ 03.02.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು:ಎ.ಜಿ.ಪಿ ರವರಿಂದ**

ನನ್ನ ಹೆಸರು ಸೈಯ್ಯದ ಹೈದರ ಎಂದು ತೋರಿಸಲು ನಿಪಿ-1 ರಿಂದ 3 ರ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನನ್ನ ಹೆಸರು ಶಾಲಾ ದಾಖಲೆಗಳಲ್ಲಿ ತಪ್ಪಾಗಿ ನೊಂದಣಿಯಾಗಿರುವ ಕುರಿತು 2023ರಲ್ಲಿ ತಿಳಿದಿರುತ್ತದೆ. ನಿಪಿ-1ರ ದಾಖಲೆಯು ಈಗಾಗಲೆ ಒಮ್ಮೆ ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ನನ್ನ ಪೋಷಕರು ನೀಡಿದ ದಾಖಲೆ ಮತ್ತು ಮಾಹಿತಿಯಂತೆ ಪ್ರತಿವಾದಿಗಳು ನನ್ನ ಹೆಸರನ್ನು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2ರ ದಾಖಲೆಯು ನಾನು ಶಾಲೆಗೆ ಸೇರಿದ ನಂತರ ತಯಾರಿಸಲ್ಪಟ್ಟ ದಾಖಲೆಯಾಗಿದೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ.

2. ನನ್ನ ದಾಖಲೆಗಳ ಆಧಾರದ ಮೇಲೆ ಪ್ರತಿವಾದಿಗಳು ನನ್ನ ಹೆಸರನ್ನು ಸರಿಯಾಗಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ಹೂಡಲು ಯಾವುದೇ ವ್ಯಾಜ್ಯ ಕಾರಣ ಇಲ್ಲದಿದ್ದರು ಸಹ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ:

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.